PSK F8

## ದಿನಾಂಕ 4-8-1997 ರಂದು ಶಿರಸಿಯ ಪಂಚವಟಿ ಹೊಟೇಲಿನಲ್ಲಿ ನಡೆಯುವ ಆರನೇಯ ಸಲಹಾ ಸಮಿತಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯುಗಳ ಮೇಲೆ ಟಿಪ್ಪಣಿ.

*****

### ವಿಷಯ ಸಂಖ್ಯೆ 3

ದಿನಾಂಕ 16-07-1996 ರಂದು ಜರುಗಿದ ಸಲಹಾ ಸಮಿತಿಯ ಸಭೆಯ ನಡುವಳಿಕೆಯ ಬಗ್ಗೆ ಕೈಗೊಂಡ ಕ್ರಮಗಳ ಪರಿಶೀಲನೆ.

ನಡುವಳಿಕೆ ಕ್ರ. ಸಂ. 3 :-

**ಇತರ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸುವ ಕುರಿತು.**

ಗ್ರಾಮ ಅರಣ್ಯ ಸಮಿತಿಯ ಅನೇಕ ಅರಣ್ಯೇತರ ಬೇಡಿಕೆಯನ್ನು ಪೂರೈಸುವ ಕುರಿತು ಚರ್ಚಿಸುವ ಸಲುವಾಗಿ ಇತರ ಇಲಾಖೆಯ ಅಧಿಕಾರಿಗಳು ಜಂಟಿ ಅರಣ್ಯ ಯೋಜನೇ ಅಡಿಯಲ್ಲಿ ನಡೆಯುವ ಉಪ ವಿಭಾಗ ಮಟ್ಟದ ಸಭೆ ಮತ್ತು ಕಾರ್ಯಕಾರಿ ಸಮಿತಿ ಸಭೆ ಹಾಗು ವೃತ್ತ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ ಭಾಗವಹಿಸಲು ಸೂಕ್ತ ನಿರ್ದೇಶನ ನೀಡಲು ಮಾನ್ಯ ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ. ಅದೇ ಪ್ರಕಾರ ತಾಲೂಕಾ ಮಟ್ಟದ ಅನೇಕ ಅಧಿಕಾರಿಗಳು ಉಪ ವಿಭಾಗಮಟ್ಟದ ಸಭೆಯಲ್ಲಿ ಹಾಗು ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಅನೇಕ ಅರಣ್ಯೇತರ ಸಮಸ್ಯೆಗಳ ಕುರಿತು ಚರ್ಚಿಸಿರುವದಾಗಿ ತಿಳಿದು ಬಂದಿದೆ. ಕಾಲಕ್ರಮೇಣ ಉಪ ವಿಭಾಗ ಮಟ್ಟದ ಸಭೆಯಲ್ಲಿ ಭಾಗವಹಿಸಿದ ಇತರ ಇಲಾಖೆಯ ಅಧಿಕಾರಿಗಳು ಇಂತ ಸಮಸ್ಯೆಗಳನ್ನು ಬಗೆ ಹರಿಸುವಲ್ಲಿ ತುಂಬಾ ಸಹಾಯ ಆಗುವದರಲ್ಲಿ ಯಾವ ಸಂಶಯವಿಲ್ಲಾ.

ನಡುವಳಿಕೆ ಕ್ರ. ಸಂ. 4 :-

**ಗ್ರಾಮ ಅರಣ್ಯ ಸಮಿತಿಯ ಕ್ಷೇತ್ರದಲ್ಲಿ ಕುಡಿಯುವ ನೀರಿನ ಪೂರೈಕೆಯ ಕುರಿತು.**

ಗ್ರಾಮ ಅರಣ್ಯ ಸಮಿತಿಯ ಗ್ರಾಮಗಳಲ್ಲಿ ನೀರಿನ ಕೊರತೆಯನ್ನು ನಿವಾರಿಸಲು ಜಿಲ್ಲಾಧಿಕಾರಿಗಳು ದಿನಾಂಕ 16-7-1996 ರ ಸಲಹಾ ಸಮಿತಿಯಲ್ಲಿ ಆಶ್ವಾಸನೆ ನೀಡಿದ ಪ್ರಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾ) ಮತ್ತು

(ಜಿ) ಕಾರವಾರರವರು ಜಿಲ್ಲಾಧಿಕಾರಿ ಕಾರವಾರ ರವರ ಸಂಗಡ' ಸಾತಗೇರಿ, ಗ್ರಾಮ ಅರಣ್ಯ ಸಮಿತಿಗಳಿಗೆ ದಿನಾಂಕ 26-9-1996 ರಂದು ಮತ್ತು ಕಮರಗಾಂವ ಗ್ರಾಮ ಅರಣ್ಯ ಸಮಿತಿ ಗ್ರಾಮಕ್ಕೆ ದಿನಾಂಕ 13-2-1997 ರಂದು ಭೇಟ್ಟಿ ನೀಡಿ ಗ್ರಾಮೀಣ ಜನರೊಂದಿಗೆ ಚರ್ಚಿಸಿ ಸಾತಗೇರಿ ಗ್ರಾಮ ಅರಣ್ಯ ಸಮಿತಿ ಯವರಿಗೆ ಅಂಗನವಾಡಿ ಕಟ್ಟಡ ಕಟ್ಟಲು ಹಾಗು ಬರ್ಗೆ ಮತ್ತು ಕಮರಗಾಂವ ಗ್ರಾಮಗಳಿಗೆ ಅವಶ್ಯವಿರುವ ಬಾವಿ ತೆಗೆಯಲು ಸ್ಥಳದಲ್ಲಿಯೇ ಮಂಜೂರಾತಿ ನೀಡಿರುತ್ತಾರೆ. ಭಟಕಳ ವಲಯದ ವೆಂಕಟಾಪುರ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ತಮ್ಮ ಗ್ರಾಮದಲ್ಲಿ ಕೊಳವೆ ಬಾವಿ ಕುರಿತು ಬೇಡಿಕೆ ಸಲ್ಲಿಸಿದ್ದು, ಸದರ್ ಬೇಡಿಕೆಯ ಮಂಜುರಿ ಸಲುವಾಗಿ ತಾಲೂಕಾ ಪಂಚಾಯತ್ ಹಾಗು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಹಿರೆಗುತ್ತಿ ವಲಯದ ಬಿದರಗೇರಿ ಗ್ರಾಮ ಅರಣ್ಯ ಸಮಿತಿ ಪ್ರದೇಶದಲ್ಲಿ ಉಪ್ಪು ನೀರಿನ ಬಾವಿ ಇದ್ದು, ಜನರಿಗೆ ಕುಡಿಯುವ ನೀರಿನ ಪೂರೈಕೆಯ ಸಲುವಾಗಿ ಸದರಿ ಗ್ರಾಮದಿಂದ ಅರ್ಧ ಕಿ. ಮೀ. ದೂರದಲ್ಲಿ ಇರುವ ಸಿಹಿ ನೀರಿನ ಬಾವಿಯಿಂದ ನೀರು ಪೂರೈಸುವ ಕುರಿತು ಮನವಿಯನ್ನು ಮಾನ್ಯ ಜಿಲ್ಲಾಧಿಕಾರಿ ಕಾರವಾರ ರವರಿಗೆ ಒಪ್ಪಿಸಲಾಗಿದೆ. ಮಂಕಿ ವಲಯದ ಕುಜ್ಞೋಡಿ ಗ್ರಾಮ ಅರಣ್ಯ ಪ್ರದೇಶದಲ್ಲಿ ಕೊಳವೆ ಬಾವಿ ತೆಗೆಯಲು ಪ್ರಸ್ತಾವನೆ ಒಪ್ಪಿಸಲಾಗಿದೆ. ಕತಗಾಲ ವಲಯದ ಶಿರಗುಂಜಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಕುಡಿಯುವ ನೀರಿನ ಕೊರತೆಯನ್ನು ತಪ್ಪಿಸುವ ಸಲುವಾಗಿ ನೀರಿನ ಟ್ಯಾಂಕ್ ಕಟ್ಟಿಸಿ ಕೊಡಲು ಸದಸ್ಯರು ಬೇಡಿಕೆ ಸಲ್ಲಿಸಿದ್ದಾರೆ. ಉಳಿದ ಕ್ಷೇತ್ರಗಳಲ್ಲಿ ನೀರಿನ ಅಭಾವದ ಕುರಿತು ಬೇಡಿಕೆ ಇರುವದಿಲ್ಲಾ.

## ನಡುವಳಿಕೆ ಕ್ರ. ಸಂ. 5, 6, 13, 14:-

### ಜಂಟೀ ಅರಣ್ಯ ಯೋಜನೆಯ ಪ್ರಚಾರ ಕುರಿತು.

ದಿನಾಂಕ 16-7-1996 ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಜಂಟಿ ಆರಣ್ಯ ಯೋಜನೆಯ ಪ್ರಚಾರ ತೀವ್ರತೆ ಬಗ್ಗೆ ಚರ್ಚಿಸಿದಂತೆ ಉಳಿದ ಗ್ರಾಮ ಅರಣ್ಯ ಸಮಿತಿ ಬಗ್ಗೆ ನೈಪುಣ್ಯ ತರಬೇತಿ ಮುಕ್ತಾಯ ಸಮಾರಂಭದ' ಕಾರ್ಯಕ್ರಮವು ದಿನಾಂಕ 6-4-1997 ರಂದು ರಾತ್ರಿ 8.00 ಘಂಟೆಗೆ ಮತ್ತು 9-4-1997 ರಂದು ಸಂಜೆ 6.00 ಘಂಟೆಗೆ ಪ್ರಸಾರವಾಗಿರುತ್ತದೆ. ಅದೇ ಪ್ರಕಾರ ಈ ಕೆಳಗಿನ ಕಾರ್ಯಕ್ರಮಗಳು ವಿವಿಧ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತವೆ.

| ಕ್ರ. ಸಂ. | ವಿಷಯ | ಪತ್ರಿಕೆಯ ಹೆಸರು ಮತ್ತು ದಿನಾಂಕ |
|---|---|---|
| 1 | ಸಾತಗೇರಿ ಗ್ರಾಮದಲ್ಲಿ ಗಿಡ ನೆಡುವ ಕಾರ್ಯಕ್ರಮ | 1) ಕರಾವಳಿ ಮುಂಜಾವು ದಿ. 15-7-97<br>2) ಸಂಯುಕ್ತ ಕರ್ನಾಟಕ ದಿ. 13-7-97 |
| 2 | ಔಷಧಿಯ ಸಸ್ಯಗಳ ಬಳಿಕೆ ವಿಚಾರ ಸಂಕೀರಣ | 1) ಉದಯವಾಣಿ ದಿ. 27-6-97<br>2) ಕರಾವಳಿ ಮುಂಜಾವು ದಿ. 25-6-97<br>3) ಸಂಯುಕ್ತ ಕರ್ನಾಟಕ ದಿ. 2-7-97 |
| 3 | ಮೊಬೈಲ್ ಬಾಯಗ್ಯಾಸ್ ಪ್ಲಾಂಟ್ | 1) ಹಿಂದು ಪತ್ರಿಕೆ ದಿ. 25-10-96 |
| 4 | ಪಾರೆಷ್ಟ್ರಿ ಸ್ಕೀಮ ಈಲ್ಡಿಂಗ್ ರಿಸಲ್ಟ | 1) ಹಿಂದು ಪತ್ರಿಕೆ ದಿ. 25-10-96 |

ಅದೇ ಪ್ರಕಾರ ಮಲವಡಿ ಗ್ರಾಮ ಅರಣ್ಯ ಸಮಿತಿಯಲ್ಲಿ ಡಿಸೆಂಬರ್ 1996 ನೇ ತಿಂಗಳಲ್ಲಿ ಗ್ರಾಮ ಅರಣ್ಯ ಸಮಿತಿಯ ಫಲಾನುಭವಿಗಳಿಗೆ ಅವರ ಪಾಲಿನ ಶೇಕಡಾ 25ರಷ್ಟು ಲಾಭಾಂಶ ಭಾಗವನ್ನು ಕಾರ್ಯಕ್ರಮದ ಮೂಲಕ ವಿತರಿಸಿದ್ದು ದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಗ್ರಾಮ ಅರಣ್ಯ ಸಮಿತಿ ಬಾಣಸಗೇರಿ ಹಾಗು ಕಾಮದೊಳ್ಳಿ ಇವರು ಜಂಟೀ ಅರಣ್ಯ ಯೋಜನೆ ಅಡಿಯಲ್ಲಿ ಅರಣ್ಯ ಒತ್ತುವರಿ ತಡೆಗಟ್ಟುವದನ್ನು ದಿನಾಂಕ 18-5-97ರ ಸುಧಾ ವಾರ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಹೊನ್ನಾವರ ವಿಭಾಗದ ಜಂಟೀ ಅರಣ್ಯ ಯೋಜನೆ ಅಡಿಯಲ್ಲಿ ದಿನಾಂಕ 17-8-1996 ರಂದು ಜಿಲ್ಲಾ ವಾರ್ತಾ ಮಾತ್ತು ಪ್ರಚಾರ ಅಧಿಕಾರಿ ಹಾಗು ದಿನ ಪತ್ರಿಕೆಗಳ ವರದಿಗಾರರನ್ನು ಮತ್ತು ಚುನಾಯಿತ ಪ್ರತಿನಿಧಿಗಳನ್ನು ಆವ್ಹಾನಿಸಿ ಗ್ರಾಮ ಅರಣ್ಯ ಸಮಿತಿಗಳ ಕಾರ್ಯ ವೈಖರಿ ಹಾಗು ಇತರ ಅಭಿವೃದ್ಧಿ ಕಾರ್ಯಗಳನ್ನು ಅವರಿಗೆ ತೋರಿಸಲಾಯಿತು. ಅದೇ ಪ್ರಕಾರ ಗ್ರಾಮ ಅರಣ್ಯ ಸಮಿತಿಯ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕುವ ಕಾರ್ಯಕ್ರಮಕ್ಕೆ ಸ್ಥಳಿಕ ಗ್ರಾಮ ಪಂಚಾಯತ ಅಧ್ಯಕ್ಷರು, ತಾಲೂಕಾ ಪಂಚಾಯತ ಅಧ್ಯಕ್ಷರು, ಜಿಲ್ಲಾ ಪಂಚಾಯತ ಸದಸ್ಯರು ಕೆಲವು ಸಲ ಮಾನ್ಯ ಸ್ಥಳೀಯ ಶಾಸಕರನ್ನು ಮುಖ್ಯ ಅಥಿತಿಗಳನ್ನಾಗಿ ಆವ್ಹಾನಿಸಲಾಗಿದೆ. ಹೊನ್ನಾವರ ವಲಯದ ಅಂಸಳ್ಳಿ ಗ್ರಾಮ ಅರಣ್ಯ ಸಮಿತಿ ಕ್ಷೇತ್ರ ದಲ್ಲಿ ದಿನಾಂಕ 26-1-97 ರಂದು ಗಣರಾಜೋತ್ಸವದ ಅಂಗವಾಗಿ ಪುಟ್ಟ ಬಾಲಕರಿಂದ "ವನ ವಿಹಾರ" ಎಂಬ ಯಕ್ಷಗಾನ ವನ್ನು ಪ್ರದರ್ಶಿಸಲಾಗಿದೆ. ಹೊನ್ನಾವರ ನ್ಯೂ ಇಂಗ್ಲಿಷ್ ಮಾಧ್ಯಮಿಕ ಶಾಲೆಯ ಹುಡುಗರಿಂದ ಮಾಗೋಡ ಗ್ರಾಮದಲ್ಲಿ "ಪರಿಸರ" ಎಂಬ ನಾಟಕವನ್ನು ಏರ್ಪಡಿಸಲಾಯಿತು. ಅನೇಕ ಗ್ರಾಮ ಅರಣ್ಯ ಸಮಿತಿಯ ಪ್ರದೇಶದಲ್ಲಿ ವನಮಹೋತ್ಸವ ಕಾರ್ಯಕ್ರಮ ಹಾಗು ಸಸಿ ವಿತರಣಾ ಕಾರ್ಯಕ್ರಮ

ಹಮ್ಮಿಕೊಳ್ಳಲಾಗಿದೆ. ಈ ರೀತಿ ಜಂಟೀ ಅರಣ್ಯ ಯೋಜನೆಯ ಅನೇಕ ಕಾರ್ಯಕ್ರಮಗಳು ದಿನ ಪತ್ರಿಕೆ, ವಾರಪತ್ರಿಕೆ, ಆಕಾಶವಾಣಿ ಮತ್ತು ದೂರವಾಣಿ ಮೂಲಕ ಪ್ರಚಾರ ಮಾಡಲಾಗಿದೆ.

*ನಡುವಳಿಕೆ ಕ್ರ. ಸಂ. 7 :-*

*ಕರಕುಶಲ ಕಲೆಯಲ್ಲಿ ನೈಪುಣ್ಯತೆ ನೀಡುವ ಕುರಿತು.*

ಗ್ರಾಮ ಅರಣ್ಯ ಸದಸ್ಯರಿಗೆ ಸ್ಥಳಿಕವಾಗಿ ಸಿಗುವ ಬಿದುರು ಮತ್ತು ಬೆತ್ತಗಳಿಂದ ವಿವಿಧ ಕರ ಕುಶಲ ಕಲೆಯಲ್ಲಿ ಪ್ರವೀಣರಾಗಲು ತರಬೇತಿ ನೀಡಲಾಗುತ್ತದೆ. ಇಂತಹ ತರಬೇತಿ ಕೆಂದ್ರಗಳನ್ನು ಯಲ್ಲಾಪುರ ವಿಭಾಗದ ಮಳಗಿಯಲ್ಲಿ ಹಾಗು ಕಾರವಾರ ವಿಭಾಗದ ಹಟ್ಟಿಕೇರಿಯಲ್ಲಿ ತೆರೆಯಲಾಗಿದೆ.

*ನಡುವಳಿಕೆ ಕ್ರ. ಸಂ. 8 :-*

*ಗ್ರಾಮ ಅರಣ್ಯ ಸಮೀತಿಯ ಸದಸ್ಯರು ಹಾಗು ಇಲಾಖೆಯ ಸಿಬ್ಬಂಧಿಯರಲ್ಲಿರುವ ಸಂಬಂಧ*

ಗ್ರಾಮ ಅರಣ್ಯ ಸಮೀತಿಯ ಸದಸ್ಯರು ಮತ್ತು ಇಲಾಖೆಯ ಸಿಬ್ಬಂದಿಯಲ್ಲಿ ಈಗ ಒಳ್ಳೇಯ ಸಂಬಂಧ ಬಂದಿರುತ್ತದೆ. ಕಾರಣ ಗ್ರಾಮ ಅರಣ್ಯ ಸಮೀತಿಯ ಕಾರ್ಯಕಲಾಪಗಳು ಸುಗಮವಾಗಿ ಸಾಗುತ್ತಿವೆ. ಕೆಲವು ಸದಸ್ಯರು ತಮ್ಮ ಗ್ರಾಮದ ಜನರ ಬೇಡಿಕೆ ಕುರಿತು ಇಲಾಖೆಯ ಮೇಲಾಧಿಕಾರಿಗಳೊಂದಿಗೆ ಅತೀ ಹತ್ತಿರವಾಗಿ ಹಾಗು ಯಾವ ಭಯ - ಭೀತಿ ಇಲ್ಲದೇ ಚರ್ಚಿಸುತ್ತಿರುವದೇ ಇದಕ್ಕೆ ಸಾಕ್ಷಿ. ಇಲಾಖೆಯ ನೌಕರರಿಗೆ ಹಾಗು ಗ್ರಾಮ ಅರಣ್ಯ ಸಮೀತಿಯ ಸದಸ್ಯರಿಗೆ ಮೇಲಿಂದ ಮೇಲೆ ನೀಡುತ್ತಿರುವ ತರಬೇತಿಯಿಂದ ಇವರ ನಡೆ ನುಡಿಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ.

*ನಡುವಳಿಕೆ ಕ್ರ. ಸಂ. 9 :-*

*ಗ್ರಾಮ ಅರಣ್ಯ ಸಮೀತಿಯ ಸದಸ್ಯರಿಗೆ ಔಷಧಿ ಗಿಡಗಳ ತಿಳುವಳಿಕೆ ನೀಡುವ ಕುರಿತು.*

ನರ್ಸರಿಯಲ್ಲಿ ಬೆಳೆಸಿದ ಔಷದಿ ಗಿಡಗಳ ಮಾಹಿತಿಯನ್ನು ಗ್ರಾಮೀಣ ಜನರಿಗೆ ತಿಳಿಸಿ ಹೇಳುವ ಕುರಿತು ಕಾರವಾರ ಮತ್ತು ಅಂಕೋಲಾದಲ್ಲಿ ಔಷಧಿ ಗಿಡಗಳ ಬಗ್ಗೆ ವಿಚಾರ ಸಂಕೀರ್ಣ ದಿನಾಂಕ 24-6-97 ರಂದು ಜರುಗಿಸಲಾಗಿದೆ.

ಹಳಿಯಾಳ ವಿಭಾಗದ ಬರ್ಚಿಯಲ್ಲಿ 10 ಹೆ. ಕ್ಷೇತ್ರದಲ್ಲಿ ಔಷಧಿ ಗಿಡಗಳ ವನವನ್ನು ನಿರ್ಮಿಸಲಾಗಿದೆ. ಸ್ಥಳೀಯರು ಈ ವನದ ಲಾಭ ಪಡೆಯುತ್ತಾರೆ. ಅದೇ ಪ್ರಕಾರ ಯಲ್ಲಾಪುರ ವಿಭಾಗದ ಕವಡಿಕೇರಿ ಗ್ರಾಮದಲ್ಲಿ ಔಷಧಿ ಗಿಡಗಳ ವನವನ್ನು ಬೆಳೆಸಿ ಗ್ರಾಮೀಣ ಜನರಿಗೆ ತಿಳುವಳಿಕೆ ನೀಡಲಾಗುತ್ತದೆ. ಗ್ರಾಮ ಅರಣ್ಯ ಸಮಿತಿಯ ಆಸಕ್ತಿ ಇದ್ದ ಸದಸ್ಯರುಗಳಿಗೆ ದಿನಾಂಕ 17-05-1997 ರಂದು ಹೊನ್ನಾವರ ವಿಭಾಗದಲ್ಲಿ ಔಷಧಿ ಸಸಿಗಳ ಬಗ್ಗೆ ತರಬೇತಿಯನ್ನು ಏರ್ಪಡಿಸಿ, ಔಷಧ ಸಸಿಗಳನ್ನು ಗುರುತಿಸುವದು ಮತ್ತು ಉಪಯೋಗಿಸುವ ಕುರಿತು ತಿಳುವಳಿಕೆ ನೀಡಲಾಯಿತು. ಇಲಾಖೆಯ ನರ್ಸರಿಯಲ್ಲಿ ಔಷಧಿ ಸಸಿಗಳಾದ ಶಿವಣೆ, ಹೊನ್ನೆ, ತುಳಸಿ, ಸರ್ಪಗಂಧಿ, ನೆಲ್ಲಿ, ತಾರೆ, ಚಿತ್ರಮೂಲ ಇತ್ಯಾದಿ ಸಸಿಗಳನ್ನು ಬೆಳೆಸಿ ಸದಸ್ಯರಿಗೆ ಹಂಚಲಾಗುವದು. ಹೊನ್ನಾವರ ವಿಭಾಗದಲ್ಲಿ ಕಳೆದ ವರ್ಷ ಧನ್ವಂತರಿ ವನವನ್ನು ನಿರ್ಮಿಸಲಾಗಿದೆ. ಈ ವನದ ಲಾಭವನ್ನು ಸುತ್ತುಮುತ್ತಲಿನ ಹಳ್ಳಿಯ ಜನರು ಪಡೆಯುತ್ತಿದ್ದಾರೆ.

## *ನಡುವಳಿಕೆ ಕ್ರ. ಸಂ. 10, 12:-*

## *ಜಂಟೀ ಅರಣ್ಯ ಯೋಜನೆಯ ಕಾರ್ಯಕ್ರಮದ ಪ್ರಚಾರ.*

ದಿನಾಂಕ 16-7-97 ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯ ತೆಗೆದುಕೊಂಡ ಪ್ರಕಾರ ಯಕ್ಷಗಾನ ಹಾಗು ಜಂಟೀ ಅರಣ್ಯ ಯೋಜನೆಯ ವಿಡಿಯೊ ಕ್ಯಾಸೆಟ್‌ಗಳನ್ನು ತಯಾರಿಸಿ ಗ್ರಾಮೀಣ ಜನರಿಗೆ ಪ್ರದರ್ಶಿಸುವ ಕ್ರಮ ತೆಗೆದುಕೊಳ್ಳಲಾಗಿದೆ. ಈಗಾಗಲೆ ಈ ಮೇಲೆ ತಿಳಿಸಿದ ಪ್ರಕಾರ ಹೊನ್ನಾವರ ವಿಭಾಗದಲ್ಲಿ ಯಕ್ಷಗಾನ ಹಾಗು ನಾಟಕಗಳ ಮುಖಾಂತರ ಈ ಯೋಜನೆಯ ಪ್ರಚಾರ ಮಾಡಲಾಗಿದೆ ಹಾಗು ಮಾಡಲಾಗುತ್ತಿದೆ.

## *ನಡುವಳಿಕೆ ಕ್ರ. ಸಂ. 11:-*

## *ಜಂಟೀ ಅರಣ್ಯ ಯೋಜನೆಯ ಕಾರ್ಯಕ್ರಮಗಳು ಆಕಾಶವಾಣಿ ಯಲ್ಲಿ ಬಿತ್ತರಿಸುವ ಬಗ್ಗೆ.*

ಆಕಾಶವಾಣಿಯಲ್ಲಿ ಬಿತ್ತರಿಸುವ ಗ್ರಾಮ ಮಂಗಳ ಕಾರ್ಯಕ್ರಮದಲ್ಲಿ ಜಂಟೀ ಅರಣ್ಯ ಯೋಜನೆಯ ಕಾರ್ಯಕ್ರಮಗಳು ಬಿತ್ತರಿಸುವ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಧಾರವಾಡದ ಆಕಾಶವಾಣಿ ಕೇಂದ್ರದ ಅಧಿಕಾರಿಗಳೊಂದಿಗೆ ಪ್ರಯತ್ನಿಸುತ್ತಿದ್ದಾರೆ.

## ನಡುವಳಿಕೆ ಕ್ರ. ಸಂ. 15 :-

ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ವಿಕಸನ ಪ್ರವಾಸ ಮಾಡುವ ಕುರಿತು.

*( Exposure Trips. )*

ಜಂಟಿ ಅರಣ್ಯ ಯೋಜನೆಯ ಕಾರ್ಯಕ್ರಮಗಳು ಈ ಜಿಲ್ಲೆಯ ಕೆಲವು ಗ್ರಾಮ ಅರಣ್ಯ ಸಮಿತಿಯಲ್ಲಿ ಚೆನ್ನಾಗಿ ನಡೆಯುತ್ತಿರುವ ಬಗ್ಗೆ ಉಳಿದ ಗ್ರಾಮ ಅರಣ್ಯ ಸಮಿತಿಯ ಜನರಿಗೆ ತೋರಿಸಿ ಅವರು ತಮ್ಮ ಗ್ರಾಮದಲ್ಲಿ ಅದೇ ಪ್ರಕಾರ ಕಾರ್ಯಕ್ರಮ ಹಾಕಿಕೊಳ್ಳಲು ಅನುಕೂಲ ಆಗುವಂತೆ ಯಲ್ಲಾಪುರ ವಿಭಾಗದ ಕವ್ವಾಳೆ, ಕೊಂಡೆಮನೆ, ಸಬಗೇರಿ, ಬಾರೆ ಗ್ರಾಮದ ಸದಸ್ಯರನ್ನು ಗೇರಾಳ ಗ್ರಾಮ ಅರಣ್ಯ ಸಮಿತಿಗೆ ಕರೆದುಕೊಂಡು ಹೋಗಿ ತೋರಿಸಲಾಗಿದೆ.

ಹಳಿಯಾಳ ವಿಭಾಗದ ಪಿರೆಗಾಳಿ ಗ್ರಾಮ ಅರಣ್ಯ ಸಮಿತಿ ಸದಸ್ಯರು ತಮ್ಮ ಶ್ರಮದಾನದಿಂದ ಸಮುದಾಯ ಭವನವನ್ನು ಕಟ್ಟಿಕೊಂಡು ಜನಹಿತದ ಒಳ್ಳೆಯ ಕೆಲಸಕ್ಕಾಗಿ ಉಪಯೋಗಿಸುತ್ತಿರುವ ಈ ವಿಷಯವನ್ನು ದಿನಾಂಕ 24-7-1997 ರಂದು ಜರುಗಿದ ವಿಭಾಗ ಮಟ್ಟದ ಕಾರ್ಯಕಾರಿ ಸಮಿತಿಯಲ್ಲಿ ಹಾಜರಾದ ಸದಸ್ಯರಿಗೆ ಮನವರಿಕೆ ಮಾಡಿ ಉಳಿದ ಗ್ರಾಮದಲ್ಲಿ ಕೂಡಾ ಈ ರೀತಿ ಕಾರ್ಯಕ್ರಮ ಕೈಗೊಳ್ಳಲು ಪ್ರೇರೆಪಿಸಲಾಗಿದೆ. ಕಳೆದ ಮೂರು- ನಾಲ್ಕು ವರ್ಷಗಳಿಂದ ವಿವಿಧ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಹಾಗು ಅಧ್ಯಕ್ಷರಿಗೆ ಮಿರಾಡ ರವರಿಂದ ನಡೆಸಲ್ಪಡುತ್ತಿರುವ ಕೇಂದ್ರಗಳಾದ ಹೊಳಲ ಕೆರೆ, ಕಮಾಲಾಪುರ, ಕಾಮಸಮುದ್ರ ಮುಂತಾದ ಸ್ಥಳಗಳಿಗೆ ಭೇಟ್ಟಿ ಕೊಟ್ಟು ಅಲ್ಲಿಯ ಸಾಧನೆಯ ಪ್ರತ್ಯಕ್ಷವಾಗಿ ತೋರಿಸಲಾಗಿದೆ, ಅದರಲ್ಲೂ ಪ್ರಾಮುಖ್ಯವಾಗಿ ಮಹಿಳೆಯರಿಗೆ ಸ್ವ ಸಹಾಯ ಉದ್ಯೋಗದ ಕೇಂದ್ರಗಳ ಕಾರ್ಯಗಳನ್ನು ತೋರಿಸಿ ವಿವರಿಸಲಾಗಿದೆ ಹಾಗು ಜಿಲ್ಲೆಯ ಅನೇಕ ಗ್ರಾಮ ಅರಣ್ಯ ಸಮಿತಿಯ ಹಳ್ಳಿಗಳಲ್ಲಿ ಮಹಿಳೆಯರು ಸ್ವ ಸಹಾಯ ಕೇಂದ್ರಗಳನ್ನು ತೆರೆದು ಅವು ಪ್ರಗತಿಯಲ್ಲಿವೆ.

## ನಡುವಳಿಕೆ ಕ್ರ. ಸಂ. 16, 17 :-

ಉಪ ವಿಭಾಗ ಮಟ್ಟದ ಸಭೆ ಕರೆಯುವ ಕುರಿತು.

ಹಿಂದಿನ ಸಲ ಹಾ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ವೃತ್ತದ ಎಲ್ಲಾ ಉಪ ವಿಭಾಗ ಮಟ್ಟದ ಸಭೆಯನ್ನು ಕರೆದು ಸದರ್ ಸಭೆಯಲ್ಲಿ ಅರಣ್ಯೇತರ ಬೇಡಿಕೆ ಬಗ್ಗೆ ಇತರ ಇಲಾಖೆಯ ತಾಲೂಕಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳುವ ಬಗ್ಗೆ ವಿನಂತಿಸಲಾಗಿದೆ ಹಾಗು ಈ ಕಾರ್ಯ ಸಂಬಂಧ

ಪ್ರಗತಿಯಲ್ಲಿದೆ. ಇತರ ಇಲಾಖೆಯ ತಾಲೂಕಾ ಮಟ್ಟದ ಅಧಿಕಾರಿಗಳು ಉಪ ವಿಭಾಗ ಮಟ್ಟದ ಸಭೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ವೈಯಕ್ತಿಕವಾಗಿ ಭಾಗವಹಿಸುವ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಸೂಕ್ತ ನಿರ್ದೇಶನ ನೀಡಬೇಕಾಗಿ ಕೋರಿದೆ.

ನಡುವಳಿಕೆ ಕ್ರ. ಸಂ. 18 :-

<u>ಗ್ರಾಮ ಅರಣ್ಯ ಸಮಿತಿ ಸದಸ್ಯರಿಗೆ ಫಾರ್ಮ ಫಾರೆಸ್ಟ್ರಿ ಬಗ್ಗೆ ತಿಳುವಳಿಕೆ ನೀಡುವ ಕುರಿತು.</u>

ಯಲ್ಲಾಪುರ ವಿಭಾಗದ ಮಳಗಿ ಹಾಗು ಹೊನ್ನಾವರ ವಿಭಾಗದ ಕುಮಟಾದಲ್ಲಿ ಇರುವ ಕೃಷಿ ಶಾಲೆಯಲ್ಲಿ ಫಾರ್ಮ ಫಾರೆಸ್ಟ್ರೀ ಬಗ್ಗೆ ಗ್ರಾಮೀಣ ಜನರಿಗೆ ತಿಳುವಳಿಕೆ ನೀಡುವ ಬಗ್ಗೆ ಕಾರ್ಯಕ್ರಮ ವನ್ನು ಮಳೆಗಾಲ ಮುಗಿದ ನಂತರ ಹಮ್ಮಿಕೊಳ್ಳಲಾಗುವದು. ಹೊನ್ನಾವರ ವಿಭಾಗದಲ್ಲಿ ಸದರಿ ಶಾಲೆಯ ಸಹಾಯದಿಂದ ಸದಸ್ಯರಿಗೆ ವರ್ಮಿಕಲ್ಚರ್ ತರಬೇತಿಯನ್ನು ಏರ್ಪಡಿಸಲಾಗಿದೆ.

ನಡುವಳಿಕೆ ಕ್ರ. ಸಂ. 19 :-

<u>ಅಸ್ತ್ರ ವಲೆಗಳ ಸರಿಯಾದ ಉಪಯೋಗದ ಕುರಿತು.</u>

ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಮನೆಗಳಿಗೆ ಪೂರೈಸಿದ ಅಸ್ತ್ರವಲೆಗಳು ಸರಿಯಾಗಿ ಕೆಲಸ ಮಾಡುತ್ತಿರುವ ಬಗ್ಗೆ ವೃತ್ತದ ಯಾವತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ತಪಾಸಿಸಿ ಖಾತ್ರಿ ಮಾಡಿರುತ್ತಾರೆ. ಅದೇ ಪ್ರಕಾರ ಓ.ಡಿ.ಎ ವತಿಯಿಂದ ಶ್ರೀ ಮಲ್ಲಿಕಾರ್ಜುನ್ ನಿವೃತ್ತ ಉಪ. ಅರಣ್ಯ ಸಂರಕ್ಷಣಾಧಿಕಾರಿಗಳು ಸರ್ವೆ ಮಾಡಿ, ಅಸ್ತ್ರ ವಲೆಗಳ ಕಾರ್ಯ ತೃಪ್ತಿಕರವಾಗಿರುವ ಬಗ್ಗೆ ತಿಳಿಸಿರುತ್ತಾರೆ. ಯಾವದೇ ಅಸ್ತ್ರವಲೆಗಳು ಸರಿಯಾಗಿ ಕೆಲಸ ಮಾಡದಿದ್ದರೆ ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಿಗೆ ಅಥವಾ ಸದಸ್ಯ ಕಾರ್ಯದರ್ಶಿಗಳಿಗೆ ತಿಳಿಸಿ ಅಸ್ತ್ರವಲೆಗಳನ್ನು ಸರಿಪಡಿಸಿಕೊಳ್ಳಲು ತಿಳಿಸಲಾಗಿದೆ. ಅಸ್ತ್ರವಲೆಗಳ ಕಾರ್ಯದ ಕುರಿತು ಹೊನ್ನಾವರ ವಿಭಾಗದಲ್ಲಿ ವಿಷಯ ಅಧ್ಯಯನ ಕೂಡ ಪ್ರಾರಂಭಿಸಿರುತ್ತಾರೆ. ಅಲ್ಲದೆ 96-97 ನೇ ಸಾಲಿನಲ್ಲಿ ಈ ವಿಭಾಗದಲ್ಲಿ ಗ್ರಾಮ ಅರಣ್ಯ ಸಮಿತಿಯ 138 ಸದಸ್ಯರುಗಳಿಗೆ ಅಸ್ತ್ರವಲೆಗಳ ಕುರಿತು ತರಬೇತಿ ನೀಡಲಾಗಿದೆ.

*ನಡುವಳಿಕೆ ಕ್ರ. ಸಂ. 20:-*

*<u>ಗ್ರಾಮ ಅರಣ್ಯ ಸದಸ್ಯರ ಮನೆಗೆ ಪೂರೈಸಿದ ಅನೀಲ ಸ್ಥಾವರದ ಕಾರ್ಯದ ಕುರಿತು.</u>*

ಗ್ರಾಮ ಅರಣ್ಯ ಸಮೀತಿಯ ಸದಸ್ಯರ ಮನೆಗಳಿಗೆ ಪೂರೈಸಿದ ಅನೀಲ ಸ್ಥಾವರಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿವೆ. 1997-98 ನೇ ಸಾಲಿನಲ್ಲಿ ಗ್ರಾಮ ಅಸರಣ್ಯ ಸಮೀತಿಯ ವ್ಯಾಪ್ತಿಯಲ್ಲಿ ಬರುವ ಹರಿಜನ ಮತ್ತು ಗಿರಿಜನರಿಗೆ ಅನೀಲ ಸ್ಥಾವರವನ್ನು ಇಲಾಖೆಯ ಖರ್ಚಿನಿಂದ ಪೂರೈಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ ಹಾಗು ಇತರ ಸದಸ್ಯರಿಗೆ ಈ ಕುರಿತು ರೂ. 1000/- ಸಹಾಯ ಧನ ಕೊಡುವದನ್ನು ಮುಂದುವರಿಸಲಾಗಿದೆ. ಈ ಕುರಿತು ಸಹಾಯ ಧನ ನೀಡುತ್ತಿರುವ ಇತರ ಇಲಾಖೆ / ಸಂಘ ಸಂಸ್ಥೆಗಳ ಲಾಭ ಪಡೆದು ಗ್ರಾಮ ಅರಣ್ಯ ಸಮೀತಿಯ ಪ್ರದೇಶದಲ್ಲಿ ಹೆಚ್ಚಿನ ಅನೀಲ ಸ್ಥಾವರ' ಸ್ಥಾಪಿಸುವ ಬಗ್ಗೆ ಹಾಗು ದಿನ ಬಳಕೆಯಲ್ಲಿ ಉರುವಲು ಕಟ್ಟಿಗೆಯ ಬಳಕೆಯನ್ನು ಕಡಿಮೆ ಮಾಡುವ ಬಗ್ಗೆ ಸದಸ್ಯರು ಸಹಾಯ ಮಾಡಬೇಕಾಗಿ ಕೋರಲಾಗಿದೆ.

*ನಡುವಳಿಕೆ ಕ್ರ. ಸಂ. 21:-*

*<u>ದೀನಬಂಧು ಅನಿಲ ಸ್ಥಾವರ ಪೂರೈಸುವ ಬಗ್ಗೆ.</u>*

ದೀನಬಂಧುರವರು ತಯಾರಿಸಿದ ಸುಧಾರಿಸಿದ ಅನೀಲ ಸ್ಥಾವರದ ಬಗ್ಗೆ ವಿವರ ಪಡೆದು ಅವಶ್ಯವಿದ್ದಲ್ಲಿ ಪೂರೈಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವದು.

*ನಡುವಳಿಕೆ ಕ್ರ. ಸಂ. 22:-*

*<u>ಉರುವಲು ಕಟ್ಟಿಗೆಯ ಉಪಯೋಗವನ್ನು ಮಿತಿಗೊಳಿಸುವ ಕುರಿತು.</u>*

ಉಪ್ಪಾಗೆ ಡ್ರಾಯರ್ ಕುರಿತು ಈಗಾಗಲೆ ಸಮೀತಿ ಅಧ್ಯಯನ ಮಾಡಿದೆ. ಸಮೀತಿಯ ವರದಿ ಪಡೆದು ಸೂಕ್ತ ಕ್ರಮ ಕೈಕೊಳ್ಳಲಾಗುವದು. ಹಾಗು ಸಮೀತಿ ತನ್ನ ವರದಿಯಲ್ಲಿ ಉರುವಲುಕಟ್ಟಿಗೆಯ ಖರ್ಚನ್ನು ಕಡಿಮೆ ಮಾಡಿಸುವ ಸಲುವಾಗಿ ಸೂಚಿಸಿದ ವಿಧಾನಗಳನ್ನು ಅಳವಡಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವದು.

## ನಡುವಳಿಕೆ ಕ್ರ. ಸಂ. 23:-

### ಕಾರವಾರ ವಿಭಾಗದಲ್ಲಿ ಉಪ್ಪಾಗೆ ಹಣ್ಣನ್ನು ಸಂಗ್ರಹಿಸುವ ಕುರಿತು.

ಕಾರವಾರ ವಿಭಾಗದಲ್ಲಿ ಸಿಗುವ ಉಪ್ಪಾಗೆ ಹಣ್ಣನ್ನು ಸ್ಥಳಿಕ ಜನರು ಹಾಳು ಮಾಡದಂತೆ ಜನರಿಗೆ ಇಲಾಖೆ ವತಿಯಿಂದ ತಿಳುವಳಿಕೆ ನೀಡಲಾಗಿದೆ. ಹಾಗು ಸಂಬಂಧಪಟ್ಟ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಉಪ್ಪಾಗೆ ಹಣ್ಣನ್ನು ಸರಿಯಾದ ಕಾಲಕ್ಕೆ ಸಂಗ್ರಹಿಸಲು ಮಾಹಿತಿ ನೀಡಲಾಗಿದೆ.

## ನಡುವಳಿಕೆ ಕ್ರ. ಸಂ. 25:-

### ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳನ್ನು ಕಾರ್ಯಕಾರಿ ಸಮಿತಿಗೆ ಆಮಂತ್ರಿತರಾಗಿ ಆವ್ಹಾನಿಸುವ ಕುರಿತು.

ಸ್ವಯಂ ಸೇವಾ ಸಮಿತಿಯ ಸದಸ್ಯರನ್ನು ವಿಭಾಗ ಮಟ್ಟದ ಕಾರ್ಯಕಾರಿ ಸಭೆಯ ಆಮಂತ್ರಿತರಾಗಿ ನಾಮಕರಣ ಮಾಡಿದ ಪ್ರಕಾರ, ದಿನಾಂಕ 21-7-97 ರಂದು ನಡೆದ ಕಾರವಾರ ವಿಭಾಗದ ಕಾರ್ಯಕಾರಿ ಸಮಿತಿಯಲ್ಲಿ ಶ್ರೀ ಅಪ್ಪಾ ಬಿಲೂರಕರ್‌ರವರು ಭಾಗವಹಿಸಿರುತ್ತಾರೆ, ಸಿರ್ಸಿ ವಿಭಾಗ ಮಟ್ಟದ ಸಭೆಯಲ್ಲಿ ಶ್ರೀ ಗೋಪಾಲ ಕೃಷ್ಣ ಹೆಗಡೆ ಯವರು ಹಾಜರಾಗಿರುತ್ತಾರೆ, ಅದೆ ಪ್ರಕಾರ ಶ್ರೀಮತಿ ಮಂಗಲಾ ಖರೆ ಯವರನ್ನು ಯಲ್ಲಾಪುರ ವಿಭಾಗ ಮಟ್ಟದ ಸಭೆಗೆ ಆಮಂತ್ರಿಸಲಾಗಿದೆ ಹಾಗು ಇತರ ವಿಭಾಗಗಳಲ್ಲಿ ಕೂಡಾ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳನ್ನು ಕಾರ್ಯಕಾರಿ ಸಭೆಗೆ ಆವ್ಹಾನಿಸಲಾಗಿದೆ.

## ನಡುವಳಿಕೆ ಕ್ರ. ಸಂ. 26:-

### ಗ್ರಾಮ ಅರಣ್ಯ ಸಮಿತಿ ಕಟ್ಟಡ ಕಟ್ಟುವ ಕುರಿತು.

ಕಛೇರಿಯ ಕಾರ್ಯಕ್ರಮಗಳನ್ನು ನಡೆಸಲು ಕಟ್ಟಡಗಳು ಇರದ ಗ್ರಾಮ ಅರಣ್ಯ ಸಮಿತಿಗಳಿಗೆ ಕಟ್ಟಡಗಳನ್ನು ಕಟ್ಟುವ ಸಲುವಾಗಿ 1997-98 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುದಾನವನ್ನು ನಿಗದಿಪಡಿಸಲಾಗಿದೆ. ಈ ಕುರಿತು ಈಗಾಗಲೆ ಕೆಲವು ವಿಭಾಗದಿಂದ ಪ್ರಸ್ತಾವನೆ ಬಂದಿವೆ.

| | |
|---|---|
| ಕಾರವಾರ ವಿಭಾಗ | ಕಮರಗಾಂವ, ತಾಳಗದ್ದೆ, ಬಾರಗದ್ದೆ, ಡೊಂಗ್ರಿ ಮತ್ತು ಹೊನ್ನೆಬೈಲ್ ಗ್ರಾಮಗಳು |
| ಯಲ್ಲಾಪುರ ವಿಭಾಗ | ಕಣ್ಣೆಗೇರಿ, ನಾಗ್ಯನ್‌ಕೊಪ್ಪ ಗ್ರಾಮಗಳು |
| ಹೊನ್ನಾವರ ವಿಭಾಗ | ಉರ್‌ಕೇರಿ, ಹರ್‌ನೀರ್, ತಲಗೋಡ, ಕೆರವಳ್ಳಿ, ಸರಳಗಿ |

ಹಳಿಯಾಳ ವಿಭಾಗದ ಪಿರಿಗಾಳಿಯಲ್ಲಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ತಮ್ಮ ಶ್ರಮದಾನದಿಂದ ಗ್ರಾಮ ಅರಣ್ಯ ಸಮಿತಿಯ ಕಛೇರಿಯನ್ನು ಕಟ್ಟಿರುತ್ತಾರೆ, ಅದೇ ಪ್ರಕಾರ ಬನವಾಸಿ ವಲಯದ ಕೋಟಿಕೊಪ್ಪ ಗ್ರಾಮದ ಸದಸ್ಯರು ಶ್ರಮದಾನದಿಂದ ಕಟ್ಟಡವನ್ನು ಕಟ್ಟಿರುತ್ತಾರೆ. ಹೊನ್ನಾವರ ವಿಭಾಗದ ಮಂಕಿಯ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಶ್ರಮದಾನದಿಂದ ತಮ್ಮ ಗ್ರಾಮದಲ್ಲಿ ಕಛೇರಿ ಕಟ್ಟಡ ಕಟ್ಟುವ ಬಗ್ಗೆ ನಿರ್ಧಾರ ತೆಗೆದುಕೊಂಡು ದಿನಾಂಕ 15-08-1997 ರಂದು ಅಡಿಗಲ್ಲು ಹಾಕುವ ಕಾರ್ಯಕ್ರಮವನ್ನು ನಿಗದಿಪಡಿಸಿರುತ್ತಾರೆ. ಈ ಮೇಲಿನ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ಮಾಡಿದ ಕಾರ್ಯ ನಿಜವಾಗಿಯು ಪ್ರಶಂಶೆಗೆ ಅರ್ಹವಾಗಿರುತ್ತದೆ. ಉಳಿದ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಈ ಕಾರ್ಯವನ್ನು ನೋಡಿ ತಮ್ಮ ಗ್ರಾಮದಲ್ಲಿ ಇಂತಹ ಕೆಲಸ ಮಾಡಿಕೊಳ್ಳಲು ಉತ್ತೇಜನ ನೀಡುತ್ತದೆ.

## ನಡುವಳಿಕೆ ಕ್ರ. ಸಂ. 27 :-

### ಧನ್ವಂತರಿ ವನ.

ಹೊನ್ನಾವರ ವಿಭಾಗದ ಕರ್ವೆಯಲ್ಲಿ ಬೆಳೆಸಿದ ಧನ್ವಂತರಿ ವನದಲ್ಲಿ ಬೆಳೆಸಬೇಕಾದ ಔಷಧಿ ಗಿಡಗಳ ಕುರಿತು ನಾಟಿ ವೈದ್ಯರಿಂದ ಚರ್ಚಿಸಿ ಈ ಕುರಿತು ಕ್ರಮ ತೆಗೆದು ಕೊಳ್ಳಲಾಗಿದೆ.

## ನಡುವಳಿಕೆ ಕ್ರ. ಸಂ. 28 :-

### ಗಣಿಯಿಂದ ಅರಣ್ಯ ನಾಶ / ಹುಲ್ಲಿನ ಪ್ಲಾಟು ಬೆಳೆಸುವ ಕುರಿತು.

ಗಣಿಗೇಣಿ ಪರಿಷ್ಕರಣೆ ಕುರಿತು ಸರಕಾರಕ್ಕೆ ಪ್ರತ್ಯೇಕ ಪ್ರಸ್ತಾವನೆ ಒಪ್ಪಿಸಲಾಗುವದು ಹಾಗು ಗಣಿ ಪ್ರದೇಶದಲ್ಲಿ ಅರಣ್ಯ ನಾಶವಾಗದಂತೆ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ. ಗಣಿಯಿಂದ ತೆರವಾದ ಸ್ಥಳದಲ್ಲಿ ನೆಡುತೋಪು ಬೆಳೆಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ಹುಲ್ಲಿನ ಪ್ಲಾಟು ಬೆಳೆಸುವಾಗ ಗ್ರಾಮ ಅರಣ್ಯ ಸಮಿತಿಯ ಜನರನ್ನು ಸಂಪರ್ಕಿಸಲು ನಿರ್ಣಯ ತೆಗೆದುಕೊಂಡ ಪ್ರಕಾರ ಯಲ್ಲಾಪುರದ ದೇಶಪಾಂಡೆ ನಗರದಲ್ಲಿ ಬೆಳೆಸಿದ ಹುಲ್ಲಿನ ತೋಪುಗಳ ಕುರಿತು ಗ್ರಾಮ ಅರಣ್ಯ

ಸಮೀತಿಯವರ ಹತ್ತಿರ ಚರ್ಚಿಸಿ ಸದಸ್ಯರ ಶ್ರಮದಾನದಿಂದ ಗೊಬ್ಬರ ಹಾಕಿ ಬೆಳೆಸುವ ಹುಲ್ಲನ್ನು ಮಾರಿ ಬಂದ ಹಣವನ್ನು ಎ.ಎಫ್.ಡಿ. ಎಫ್ ನಲ್ಲಿ ಇಡಲಾಗಿದೆ.

ಹಳಿಯಾಳ ವಿಭಾಗದ ಜತಗಾದಲ್ಲಿ ಬೆಳೆಸಿದ 2.5 ಹೆ. ಹುಲ್ಲಿನ ನೆಡುತೊಪುವಿನಲ್ಲಿ ಸಿಗುವ ಹುಲ್ಲನ್ನು ಸದಸ್ಯರು ತಮ್ಮ ದನ ಕರುಗಳಿಗೆ ಉಪಯೋಗಿಸುತ್ತಿದ್ದಾರೆ. ಕಾರವಾರ ವಿಭಾಗದಲ್ಲಿ 97-98 ನೇ ಸಾಲಿನಲ್ಲಿ 3 ಹೆ. ಕ್ಷೇತ್ರದಲ್ಲಿ ಸುಧಾರಿಸಿದ ಜಾತಿಯ ಹುಲ್ಲನ್ನು ಬೆಳೆಸುವ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ತಾಲೂಕಾ ಮಟ್ಟದ ಸಭೆಯಲ್ಲಿ ಈ ವಿಷಯವನ್ನು ಚರ್ಚಿಸಿ ನಿಜವಾಗಿಯು ಆಸಕ್ತಿ ಉಳ್ಳ ಗ್ರಾಮ ಅರಣ್ಯ ಸಮಿತಿಯನ್ನು ಗುರುತಿಸಿ ಹುಲ್ಲಿನ ಪ್ಲಾಟನ್ನು ಬೆಳೆಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವದು.

## ನಡುವಳಿಕೆ ಕ್ರ. ಸಂ. 29, 31(ಅ) :-

### ಗ್ರಾಮ ಅರಣ್ಯ ಸಮೀತಿ ರಚನೆ / ತರಬೇತಿ.

ಈಗಾಗಲೆ ಬೆಳೆಸಿದ ಜಿ. ಎಫ್. ಪಿ. ಎಮ್ ನೆಡುತೋಪುಗಳ ಗ್ರಾಮಗಳಲ್ಲಿ ಗ್ರಾಮ ಅರಣ್ಯ ಸಮೀತಿಯನ್ನು ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳ ಸಹಾಯದಿಂದ ರಚಿಸಲಾಗಿದೆ.

ಹೊಸದಾಗಿ ಬಂದ ವಲಯ ಅರಣ್ಯಾಧಿಕಾರಿಗಳಿಗೆ ಮಿರಜಾರವರ ಮುಖಾಂತರ ಜಂಟಿ ಅರಣ್ಯ ಯೋಜನೆ ಹಾಗು ನಿರ್ವಹಣೆ ಕುರಿತು ತರಬೇತಿ ನೀಡಲಾಗಿದೆ ಹಾಗು ಇಲಾಖೆಯ ಎಲ್ಲಾ ಸಿಬಂದಿಗಳಿಗೆ ಈ ಯೋಜನೆಯ ಅಡಿಯಲ್ಲಿ ತರಬೇತಿ ನೀಡುವ ಕಾರ್ಯಕ್ರಮ ಪ್ರಗತಿಯಲ್ಲಿದೆ.

## ನಡುವಳಿಕೆ ಕ್ರ. ಸಂ. 31:-

### ಜೆ ಎಫ್. ಪಿ. ಎಮ್. ನೆಡುತೋಪು.

1996-97 ನೇ ವಾರ್ಷಿಕ ಕ್ರಿಯಾಯೋಜನೆಯ ಪ್ರಕಾರ ಪಶ್ಚಿಮ ಘಟ್ಟ ಅರಣ್ಯೀಕರಣ ಯೋಜನೆಯ ಅಡಿಯಲ್ಲಿ ಒಟ್ಟಿಗೆ 1111 ಹೆ. ಕ್ಷೇತ್ರದಲ್ಲಿ ಜಿ. ಎಫ್. ಪಿ. ಎಮ್. ನೆಡುತೋಪು 1997 ಮಳೆಗಾಲದಲ್ಲಿ ಬೆಳಸಬೇಕಾಗಿತ್ತು ಆದರೆ ಗ್ರಾಮ ಅರಣ್ಯ ಸಮೀತಿಯೊಂದಿಗೆ ಮಾಡಿಕೊಂಡ ಸೌಹಾರ್ದ ಒಡಂಬಡಿಕೆ ಪ್ರಕಾರ ಬೆಳೆಸಬೇಕಾದ ನೆಡುತೋಪುವಿನ ಪ್ರಮಾಣ ಹೆಚ್ಚಿಗೆ ಇರುವದರಿಂದ ಉಳಿದ ಕೆಲಸದಲ್ಲಿ ಆದ ಉಳಿತಾಯ ಹಣದಲ್ಲಿ ಹೆಚ್ಚಿನ 407 ಹೆ ಕ್ಷೇತ್ರದಲ್ಲಿ ಜಿ. ಎಫ್. ಪಿ. ಎಮ್ ನೆಡುತೊಪು ಬೆಳೆಸಲಾಗಿದೆ.

ನಡುವಳಿಕೆ ಕ್ರ. ಸಂ. 32:-

ಅನಧಿಕೃತವಾಗಿ ಮರಗಳನ್ನು ಕಡಿದು ಸಾಗಿಸುವ ಕುರಿತು / ಸಸಿಗಳ ವಿತರಣೆ / ಟಿಂಬರ್

ಬಾಳಶೆಟ್ಟಿ ಕೊಪ್ಪಾ ಮತ್ತು ವಾಡಾದಲ್ಲಿ ಅನಧಿಕೃತವಾಗಿ ಮರಗಳನ್ನು ಕಡಿದು ಸಾಗಿಸುವದನ್ನು ಹತ್ತಿಕ್ಕಲಾಗಿದೆ.

ಜನರಿಗೆ ತಮ್ಮ ಕ್ಷೇತ್ರದಲ್ಲಿ ನೆಡಲು ಅವಶ್ಯವಿರುವ ಸಸಿಗಳನ್ನು ಇಲಾಖೆ ನರ್ಸರಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಸಲಾಗಿದೆ ಜನರ ಬೇಡಿಕೆಗೆ ಅನುಸಾರವಾಗಿ ಸಸಿಗಳನ್ನು ಹಂಚಲಾಗುವದು. ಜನರು ಅಕೇಶೀಯಾ ಗಿಡಗಳನ್ನು ಕೇಳಿದರೆ ಅವುಗಳನ್ನು ಕೂಡಾ ಪೂರೈಸಲಾಗುವದು.

ಸ್ಥಳಿಕ ಜನರಿಗೆ ಮನೆ ಕಟ್ಟುವ ಸಲುವಾಗಿ ನಾಟುಗಳ ಅವಶ್ಯಕತೆ ಇದ್ದರೆ, ಅವರಿಗೆ ಮೊದಲ ಪ್ರಾಶಸ್ತ್ಯ ನೀಡಿ ನಂತರ ಉಳಿದ ಜಿಲ್ಲೆಯ ಬೇಡಿಕೆಯನ್ನು ಪೂರೈಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವದು.

ನಡುವಳಿಕೆ ಕ್ರ. ಸಂ. 33 :-

ಪಂಟೀ ಅರಣ್ಯ ಯೋಜನೆಯ ಕಾರ್ಯಕ್ರಮವನ್ನು ಮುಂದುವರಿಸುವ ಕುರಿತು.

ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯ ಎರಡನೇಯ ಹಂತ ಮುಂದುವರಿಸುವ ಬಗ್ಗೆ ಮೇಲಾಧಿಕಾರಿ ಹಾಗು ಸರಕಾರದ ಮಟ್ಟದಲ್ಲಿ ಚರ್ಚೆ ಮುಂದುವರೆದಿದೆ. ಒಂದು ವೇಳೆ ಈ ಯೋಜನೆಯು ಮುಂದುವರೆಯದಿದ್ದರೆ, ಇಲಾಖೆಯ ಇತರ ಯೋಜನೆಗಳ ಸಹಾಯದಿಂದ ಪಶ್ಚಿಮ ಘಟ್ಟ ಅರಣ್ಯೀಕರಣ ಯೋಜನೆಯ ಕಾರ್ಯಕ್ರಮಗಳನ್ನು ಮುಂದುವರಿಸಲಾಗುವದು.

ನಡುವಳಿಕೆ ಕ್ರ. ಸಂ. 34 :-

ಅರಣ್ಯ ಹಾಗು ಅರಣ್ಯೇತರ ಕಾರ್ಯಕ್ರಮಗಳನ್ನು ಗ್ರಾಮ ಅರಣ್ಯ ಸಮಿತಿ ಮೂಲಕ ಮಾಡಿಸುವ ಬಗ್ಗೆ.

ಪಂಟೀ ಅರಣ್ಯ ಯೋಜನೆಯ ಅನೇಕ ಅರಣ್ಯ ಮತ್ತು ಅರಣ್ಯೇತರ ಕಾರ್ಯಕ್ರಮಗಳನ್ನು ಗ್ರಾಮ ಅರಣ್ಯ ಸಮಿತಿಯವರಿಂದಲೆ ಮಾಡಿಸಿಕೊಳ್ಳುವ ಬಗ್ಗೆ ಪ್ರಯತ್ನ ನಡೆದಿದೆ. ಈ ದಿಸೆಯಲ್ಲಿ ಕಳೆದ ವರ್ಷ ಅರಣ್ಯವನ್ನು ಬೆಂಕಿಯಿಂದ ರಕ್ಷಿಸುವ ಕೆಲಸದಲ್ಲಿ ಅನೇಕ ಗ್ರಾಮ ಅರಣ್ಯ ಸಮಿತಿಗಳು ಭಾಗವಹಿಸಿ ಯಶಸ್ವಿ ಆಗಿವೆ. ಕಾಲಕ್ರಮೇಣ ಈ ವಿಷಯದಲ್ಲಿ ನಾವು ಹೆಚ್ಚಿನ ಯಶಸ್ಸು ಕಾಣಬಹುದು.

## ನಡುವಳಿಕೆ ಕ್ರ. ಸಂ. 35, 36 :-

ಜಂಟೀ ಅರಣ್ಯ ಯೋಜನೆಯಲ್ಲಿ ಮಹಿಳೆಯರ ಸಹಭಾಗಿತ್ವ.

ಗ್ರಾಮದಹೆಣ್ಣುಮಕ್ಕಳಿಗೆ ಅರಣ್ಯ ರಕ್ಷಣೆಯಲ್ಲಿ ಅವರ ಕರ್ತವ್ಯದ ಬಗ್ಗೆ ಈಗಾಗಲೆ ವಿವರಿಸಲಾಗಿದೆ. ಗ್ರಾಮ ಅರಣ್ಯ ಸಮೀತಿಯ ಸಭೆಯಲ್ಲಿ ಹೆಣ್ಣುಮಕ್ಕಳ ಹಾಜರಾತಿ ಹಿಂದಿನಗಿಂತಲು ಈಗ ಹೆಚ್ಚಾಗಿದೆ. ಕಾರವಾರ ವಿಭಾಗದ ಸಾತಗೇರಿ ಮತ್ತು ಹಳಿಯಾಳ ವಿಭಾಗದ ಬಾಣಸಗೇರಿ ಗ್ರಾಮ ಅರಣ್ಯ ಸಮೀತಿಯಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಶೇಕಡಾ 100 ಇರುತ್ತದೆ. ಇನ್ನು ಕೆಲವು ಗ್ರಾಮ ಅರಣ್ಯ ಸಮೀತಿಯನ್ನು ಮಹಿಳಾ ಸದಸ್ಯರಿಂದಲೇ ರಚಿಸುವ ಕುರಿತು ಪ್ರಯತ್ನ ನಡೆದಿದೆ.ಪರಿಷ್ಕ್ರುತ ಜಂಟೀ ಅರಣ್ಯ ಯೋಜನೆ ಕುರಿತು ಹೊರಡಿಸಿದ ಸರಕಾರಿ ಆದೇಶದ ಪ್ರಕಾರ ಪ್ರತಿ ಕುಟುಂಬದಲ್ಲಿ ಎರಡು ಜನ ಸದಸ್ಯರನ್ನಾಗಿ ನೇಮಿಸಲು ( ಪತಿ - ಪತ್ನಿ ) ಅವಕಾಶವಿದ್ದು ಈಗ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುವ ಕುರಿತು ಕ್ರಮ ಕೈಗೊಳ್ಳಲಾಗಿದೆ.

## ನಡುವಳಿಕೆ ಕ್ರ. ಸಂ. 37 :-

ಇತರ ಇಲಾಖೆಯ ಅಧಿಕಾರಿಗಳಿಗೆ ಜಂಟೀ ಅರಣ್ಯ ಯೋಜನೆಯಲ್ಲಿ ತರಬೇತಿ ನೀಡುವ ಕುರಿತು.

ಇತರ ಇಲಾಖೆಯ ಅಧಿಕಾರಿಗಳಿಗೆ ಕೂಡಾ ಜಂಟೀ ಅರಣ್ಯ ಯೋಜನೆಯ ಉದ್ದೇಶ ಹಾಗು ಕಾರ್ಯದ ಕುರಿತು ಮಿರಾಡರವರ ಮೂಲಕ ತರಬೇತಿ ನೀಡಲು ಕ್ರಮ ತೆಗೆದುಕೊಳ್ಳಲಾಗುವದು.

## ನಡುವಳಿಕೆ ಕ್ರ. ಸಂ. 38 :-

ಕಟ್ಟಡಗಳಿಗೆ ಉಪಯೋಗಿಸುವ ಕಟ್ಟಿಗೆಯನ್ನು ಕಡಿಮೆ ಮಾಡುವ ಕುರಿತು.

ಇತ್ತಿತ್ತಲಾಗಿ ಸರಕಾರಿ ಕಟ್ಟಡಗಳು ಹೆಚ್ಚಾಗಿ ಆರ್. ಸಿ. ಸಿ ಯಿಂದ ಕಟ್ಟುತ್ತಿರುವದರಿಂದ ಕಟ್ಟಡಗಳಿಗೆ ಉಪಯೋಗಿಸುತ್ತಿರುವ ಕಟ್ಟಿಗೆ ಪ್ರಮಾಣ ಬಹಳಷ್ಟು ಕಡಿಮೆಯಾಗಿದೆ.

ಹೊನ್ನಾವರ ವಿಭಾಗದ ಗ್ರಾಮ ಅರಣ್ಯ ಸಮಿತಿಯ ಸಭೆಯ ಕಾಲಕ್ಕೆ ಸದಸ್ಯರಿಂದ ಅನೇಕ ಅರಣ್ಯೇತರ ಬೇಡಿಕೆಗಳು ಬಂದಿದ್ದು , ಅಂತ ಕೆಲವು ಬೇಡಿಕೆಗಳು ಈ ಕೆಳಗಿನಂತಿವೆ. ಈ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ಸಂಬಂದ ಪಟ್ಟ ಇತರ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಿ ಬೇಡಿಕೆ ಈಡೇರಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವದು.

| ಕ್ರ. ಸಂ. | ಗ್ರಾಮ ಅರಣ್ಯ ಸಮಿತಿಯ ಹೆಸರು | ಬೇಡಿಕೆಯ ವಿವರ |
|---|---|---|
| 1 | ಕುಂಟವಾಣಿ | (ಅ) ಬಡ್ತಿ ಬಾಗಿಲು ಹಳ್ಳ ಸೇತುವೆ.<br>(ಆ) ಜಾನುವಾರು ದವಾಖಾನೆ. |
| | ವೆಂಕಟಾಪುರ | (ಅ) ದುರ್ಗಾಪರಮೇಶ್ವರಿ - ಹುರಿಳಿಸಾಲ ರಸ್ತೆ ರಿಪೇರಿ |
| 3 | ಕಟಗಾರಕೊಪ್ಪಾ | (ಅ) ಶಾಲೆಗೆ ಇಬ್ಬರ ಶಿಕ್ಷಕರ ಅವಶ್ಯಕತೆ<br>(ಆ) ಕಟಗಾರಕೊಪ್ಪಾ - ಚಿತ್ರಾಪುರ ರಸ್ತೆ ರಿಪೇರಿ |
| 4 | ಕೋಣಾರ | (ಅ) ಸರ್ಪನಕಟ್ಟಾ - ಕೋಣಾರ ರಸ್ತೆ ರಿಪೇರಿ |
| 5 | ಮಾರುಕೇರಿ | (ಅ) ಅರೆಕಲ್ ಗೋಳಿ ಕೆರೆಯಲ್ಲಿ ಮೀನು ಬೆಳೆಸುವದು |
| 6 | ಬಾಳಿಮಠ | (ಅ) ಕುಡಿಯುವ ನೀರಿನ ವ್ಯವಸ್ಥೆ<br>(ಆ) 7 ನೇ ತರಗತಿಯವರಿಗೆ ಶಾಲೆ ಪ್ರಾರಂಭಿಸುವದು |
| 7 | ಬಳ್ಕೂರ್ | (ಅ) ರಸ್ತೆ ರಿಪೇರಿ |
| 8 | ಅನಿಲಗೋಡ | (ಅ) ಹೆಗ್ಗಾರ ಕೋಡಿ ಕಾಲುಸಂಕ |
| 9 | ಕಾಜೋಡಿ | (ಅ) ಕೊಳವೆ ಬಾವಿ<br>(ಆ) ಹಾಡಲ್ - ಕಾಜೋಡಿ ರಸ್ತೆ<br>(ಇ) ಗ್ರಾಮದಲ್ಲಿ ಶಾಲೆ ತೆರೆಯುವದು |

ವಿಷಯ ಸಂಖ್ಯೆ : 4

ಕಳೆದ ಸಲಹಾ ಸಮಿತಿ ಸಭೆಯ ನಂತರದ ದಿನಾಂಕ ದಿಂದ ಈವರೆಗೆ ಸಾಧಿಸಿದ ಪ್ರಗತೀಯ ಪರಿಶೀಲನೆ.

## ಅ. ಜಂಟೀ ಅರಣ್ಯ ಯೋಜನೆ ಮತ್ತು ನಿರ್ವಹಣೆಯ ಚಟುವಟಿಕೆಗಳು ಹಾಗು ಗ್ರಾಮ ಅರಣ್ಯ ಸಮಿತಿಯ ರಚನೆ.

ಜಂಟೀ ಅರಣ್ಯ ಯೋಜನೆ ಅಡಿಯಲ್ಲಿ ತೆಗೆದುಕೊಂಡ ಕಾರ್ಯಕ್ರಮದ ವಿವರಗಳನ್ನು ತೋರಿಸುವ ಲಿಸ್ಟ್‌ನ್ನು ಲಗ್ತ ಇಟ್ಟಿದೆ.

## ಆ. ತರಬೇತಿ ಕಾರ್ಯಕ್ರಮ.

ಅರಣ್ಯ ಇಲಾಖಾ ಸಿಬ್ಬಂದಿಗೆ ಹಾಗು ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಯೋಜನೆಯ ವಿವಿಧ ವಿಷಯಗಳಲ್ಲಿ ತರಬೇತಿ ನೀಡುವ ಕಾರ್ಯಕ್ರಮ ಮಿರಾಡಾ ರವರಿಂದ ಪ್ರಗತಿಯಲ್ಲಿದೆ. ಅಷ್ಟೇ ಅಲ್ಲದೆ ಸ್ವಯಂ ಸೇವಾ ಸಂಘಗಳು ತಮ್ಮ ಕ್ಷೇತ್ರದಲ್ಲಿ ಬರುವ ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಅವಶ್ಯವಿರುವ ವಿಷಯದಲ್ಲಿ ತರಬೇತಿ ನಿಡುವ ಕಾರ್ಯಕ್ರಮ ಕೂಡಾ ಪ್ರಗತಿಯಲ್ಲಿದೆ.

## ಇ. ನೆಡುತೋಪು.

1997 ನೇ ಮಳೆಗಾಲದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ವಿಭಾಗ ಗಳಲ್ಲಿ ಒಟ್ಟಿಗೆ 1518 ಹೆ. ಕ್ಷೇತ್ರದಲ್ಲಿ ವಿವಿಧೊದ್ದೇಶ ನೆಡುತೋಪು, 302 ಹೆ. ಕ್ಷೇತ್ರದಲ್ಲಿ ಬೆತ್ತದ ನೆಡುತೋಪು, 105 ಹೆ. ಕ್ಷೇತ್ರದಲ್ಲಿ ಬಿದುರಿನ ನೆಡುತೋಪು ಹಾಗು 3 ಹೆ. ಕ್ಷೇತ್ರದಲ್ಲಿ ಹುಲ್ಲಿನ ಪ್ಲಾಟನ್ನು ಬೆಳೆಸಲಾಗಿದೆ. ವಿವಿಧೊದ್ದೇಶ ನೆಡುತೋಪುಗಳಲ್ಲಿ ಹೆಚ್ಚಾಗಿ ಕಿರು ಅರಣ್ಯ ಉತ್ಪನ್ನ ಜಾತಿಯ ಗಿಡಗಳನ್ನು ನೆಡಲಾಗುವದು. ಆದರೆ ಗ್ರಾಮ ಅರಣ್ಯ ಸಮಿತಿಯ ಸದಸ್ಯರು ತಮ್ಮ ಗ್ರಾಮ ದಲ್ಲಿ ಆಗಿರುವ ಉರುವಲು ಕಟ್ಟಿಗೆಯ ಕೊರತೆಯನ್ನು ನೀಗಿಸಲು ಉರುವಲು ಕಟ್ಟಿಗೆಯ ಜಾತಿಯ ಗಿಡಗಳನ್ನು ನೆಡಲು ವಿನಂತಿಸಿಕೊಂಡಾಗ, ಅಕೇಶೀಯಾದಂತ ಉರುವಲು ಕಟ್ಟಿಗೆ ಜಾತಿಯ ಗಿಡಗಳನ್ನು

ನೆಡಲಾಗುವದು. ಇದರ ಹೊರತಾಗಿ ಅವನತಿ ಹೊಂದಿದ 547 ಹೆ. ಅರಣ್ಯ ಕ್ಷೇತ್ರದಲ್ಲಿ ಟಿಂಬರ್ ಬರುವಂತ ಸಸಿಗಳನ್ನು ಹಾಗು 307 ಹೆ. ಕ್ಷೇತ್ರದಲ್ಲಿ ಉರುವಲು ಕಟ್ಟಿಗೆಯ ನೆಡುತೋಪುಗಳನ್ನು ಬೆಳೆಸಲಾಗಿದೆ. 657 ಹೆ. ಕ್ಷೇತ್ರದಲ್ಲಿ ಬರುವ ಒಳ್ಳೆಯ ನೈಸರ್ಗಿಕ ಅರಣ್ಯವನ್ನು ದನು-ಕರುಗಳಿಂದ ರಕ್ಷಿಸುವ ಕುರಿತು ಜಾನುವಾರು ನಿರೋಧಕ ಕಂದಕಗಳನ್ನು ತೆಗೆದು ರಕ್ಷಣೆ ನೀಡಲಾಗಿದೆ ಹಾಗು 21 ಹೆ. ಕ್ಷೇತ್ರದಲ್ಲಿ ಅರಣ್ಯ ಅತಿಕ್ರಮಣವನ್ನು ತಡೆಗಟ್ಟುವ ಸಲುವಾಗಿ ನೆಡುತೋಪು ಬೆಳೆಸಲಾಗಿದೆ. 1997 ನೇ ಮಳೆಗಾಲದಲ್ಲಿ ನೆಡುತೋಪು ಬೆಳೆಸುವ ಸಲುವಾಗಿ ಒಟ್ಟಿಗೆ 34.38 ಲಕ್ಷ ಸಸಿಗಳನ್ನು ಈ ಯೋಜನೆಯ ಅಡಿಯಲ್ಲಿ ಬೆಳೆಸಲಾಗಿದೆ.

## ಈ. ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯ ಅಡಿಯಲ್ಲಿ ಇತರ ಇಲಾಖೆಯ ಸಹ ಭಾಗಿತ್ವ

ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಇತರ ಇಲಾಖೆಯ ಸಹ ಭಾಗಿತ್ವ ಅತೀ ಅವಶ್ಯ. ಗ್ರಾಮೀಣ ಜನರ ಅರಣ್ಯೇತರ ಬೇಡಿಕೆಯನ್ನು ಈಡೇರಿಸುವಲ್ಲಿ ಉಪ ವಿಭಾಗ ಮಟ್ಟದ ಸಮಿತಿಯ ಸಭೆಯು ಮುಖ್ಯ ಪಾತ್ರ ವಹಿಸಲಿದೆ. ಈಗಾಗಲೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ ವಿಭಾಗ ಮಟ್ಟದ ಸಭೆಯಲ್ಲಿ ಇತರ ಇಲಾಖೆಯ ತಾಲೂಕಾ ಮಟ್ಟದ ಅಧಿಕಾರಿಗಳನ್ನು ಆಮಂತ್ರಿಸಿ ಗ್ರಾಮ ಅರಣ್ಯ ಸಮಿತಿಯ ಸದಸ್ಯರ ಅರಣ್ಯೇತರ ಸಮಸ್ಯೆಯನ್ನು ಬಗೆ ಹರಿಸುವಲ್ಲಿ ಕ್ರಮ ಕೈಗೊಂಡಿರುತ್ತಾರೆ. ಉಪ ವಿಭಾಗ ಮಟ್ಟದ ಸಭೆಯು ಕಾಲಕ್ರಮೇಣ ಹೆಚ್ಚಿನ ಫಲಪ್ರದ ವಾಗುವದರಲ್ಲಿ ಯಾವ ಸಂಶಯವಿಲ್ಲಾ. ಆದರೆ ಇತರ ಇಲಾಖೆಯ ಅಧಿಕಾರಿಗಳು ಸದರ್ ಸಭೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿದರೆ ಮಾತ್ರ ಈ ದಿಸೆಯಲ್ಲಿ ಹೆಚ್ಚಿನ ಲಾಭವನ್ನು ಪಡೆಯಬಹುದಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ರವರು ಜಿಲ್ಲೆಯಲ್ಲಿ ಬರುವ ಎಲ್ಲ ಇತರ ಇಲಾಖೆಯ ತಾಲೂಕಾ ಹಾಗು ಉಪ ವಿಭಾಗ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನವನ್ನು ನೀಡಲು ಕೋರಲಾಗಿದೆ.

## ವಿಷಯ ಸಂಖ್ಯೆ : 5

### ಸರಕಾರೇತರ ಸಂಘ ಸಂಸ್ಥೆಗಳು.

ಪಶ್ಚಿಮ ಘಟ್ಟ ಅರಣ್ಯೀಕರಣ ಮತ್ತು ಪರಿಸರ ಯೋಜನೆಯಡಿಯಲ್ಲಿ ಜಂಟೀ ಅರಣ್ಯ ಯೋಜನೆ ಮತ್ತು ನಿರ್ವಹಣೆ ಅನುಷ್ಠಾನವನ್ನು ಪ್ರಗತಿಯಲ್ಲಿ ತರುವಲ್ಲಿ ಸ್ವಯಂ ಸೇವಾ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಪಾತ್ರ ನಿಜವಾಗಿಯು ತುಂಬಾ ಮಹತ್ವವಾದದ್ದು. ಇಂತಹ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸ್ಥಳಿಕರಾಗಿದ್ದು ಗ್ರಾಮೀಣ ಜನರೊಡನೆ ಬೆರೆತಿರುವದರಂದ ಅವರ ಸಂಪೂರ್ಣ ಕುಂದು ಕೊರತೆಗಳನ್ನು ಅರಿತವರಾಗಿರುತ್ತಾರೆ. ಇಂತಹ ಪ್ರತಿನಿಧಿಗಳಿಂದ ಗ್ರಾಮೀಣ ಜನರನ್ನು ಈ ಯೋಜನೆಯಲ್ಲಿ ತೊಡಗಿಸುವಲ್ಲಿ ಹೆಚ್ಚಿನ ಯಶಸ್ವಿಯಾಗುವದು. ಅಷ್ಟೇ ಅಲ್ಲದೆ ಈ ಸಂಘ ಸಂಸ್ಥೆಗಳು ಗ್ರಾಮ ಅರಣ್ಯ ಸಮಿತಿಯ ಸದಸ್ಯರಿಗೆ ಅವಶ್ಯವಿರುವ ವಿಷಯದಲ್ಲಿ ತರಬೇತಿ ನೀಡಲು ಮುಂದಾಗಿರುತ್ತಾರೆ.

*************

{Pr.} *{meet-pan.wpd}*

## J.F.P.M ACTIVITIES UNDER ODA, PROJECT - KANARA CIRCLE.

| SL. NO. | DIVISION. | YEAR | NO. OF V.F.C FORMED | NO. OF M.O.U SIGNED | NO OF MICRO PLAN WRITTEN | ASTRA OLE INSTALLED. | BIO-GAS INSTALLED | J.F.P.M. PLANTATIOI RAISED. | Artisanal Plantation in Ha. |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | Haliyal | 93-94 | 13 | -- | -- | -- | 35 | 180 Ha. | 100 |
| | | 94-95 | 5 | 11 | 13 | 485 | 149 | 240 Ha. | 227 |
| | | 95-96 | 20 | 21 | 23 | 725 | 11 | 290 Ha. | 400 |
| | | 96-97 | 5 | 2 | -- | 125 | -- | 522 Ha. | 307 |
| | | 97-98 | -- | 1 | 1 | -- | -- | 350 Ha. | 75 |
| | TOTAL OF HALIYAL DIV. | | 43 | 35 | 37 | 1335 | 195 | 1582 | 1109 |
| 2 | Yellapur | 93-94 | 9 | -- | -- | -- | -- | 250 Ha. | 100 |
| | | 94-95 | 3 | 2 | -- | 430 | 2 | 275 Ha. | 175 |
| | | 95-96 | 17 | 12 | 25 | 50 | 2 | 250 Ha. | 190 |
| | | 96-97 | -- | 13 | 2 | 450 | 35 | 225 Ha. | 155 |
| | | 97-98 | | 2 | 2 | -- | -- | 215 Ha. | -- |
| | Total of Yellapur Division | | 29 | 29 | 29 | 930 | 39 | 1215 | 620 |
| 3 | Karwar | 93-94 | 7 | -- | -- | -- | -- | 200 Ha. | 100 |
| | | 94-95 | 12 | 4 | 4 | 634 | -- | 370 Ha. | 250 |
| | | 95-96 | 17 | 11 | 17 | 1169 | 1 | 246 Ha. | 340 |
| | | 96-97 | 4 | 11 | 5 | 839 | | 594 Ha. | 250 |
| | | 97-98 | | 10 | 13 | | -- | 447 Ha | 205 |
| | TOTAL OF KARWAR DIV. | | 40 | 36 | 39 | 2642 | 1 | 1857 | 1145 |

| SL. NO. | DIVISION. | YEAR | NO. OF V.F.C FORMED | NO. OF M.O.U SIGNED | NO OF MICRO PLAN WRITTEN | ASTRA OLE INSTALLED. | BIO-GAS INSTALLED | J.F.P.M. PLANTATIOI RAISED. | Artisanal Plantation in Ha. |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 4 | Honnavar | 93-94 | 13 | -- | -- | -- | -- | 300 Ha. | 95 |
| | | 94-95 | 11 | 4 | 4 | 327 | 16 | 285 Ha. | 230 |
| | | 95-96 | 16 | 4 | 20 | 662 | 21 | 180 Ha. | 328 |
| | | 96-97 | 15 | 35 | 25 | 658 | 17 | 474 Ha. | 206 |
| | | 97-98 | 2 | 11 | 5 | -- | -- | 302 Ha | 102 |
| | Total of Honnavar Division. | | 57 | 54 | 54 | 1647 | 54 | 1541 | 961 |
| 5 | Sirsi. | 93-94 | 8 | -- | -- | -- | -- | 690 Ha. | 136 |
| | | 94-95 | 9 | 3 | 7 | 596 | -- | 389 Ha. | 50 |
| | | 95-96 | 15 | 26 | 23 | 97 | 5 | 418 Ha. | 125 |
| | | 96-97 | 24 | 21 | 20 | 218 | 7 | 446 Ha. | 100 |
| | | 97-98 | | | 5 | | | 208 Ha | 25 |
| | TOTAL OF SIRSI DIV. | | 56 | 50 | 55 | 911 | 12 | 2151 | 436 |
| GRAND TOTAL OF ALL DIV. | | | 225 | 204 | 214 | 7465 | 301 | 8346 | 4271 |